# ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಸಿ.ಜೆ.ಎಂ. ನ್ಯಾಯಾಲಯ, ಚಾಮರಾಜನಗರ

## ಸಿ.ಸಿಃ 899/2025

ಫ್ರಾಸಾ-4, ಚಾಸಾ-1

| | | |
|---|---|---|
| ಸಾಕ್ಷಿದಾರರ ಹೆಸರು | : | ರವಿಕಿರಣ್.ಎಸ್.ಎಸ್ |
| ತಂದೆಯ ಹೆಸರು | : | ಸಿದ್ದರಾಜು |
| ವಯಸ್ಸು | : | 44ವರ್ಷ |
| ಉದ್ಯೋಗ | : | ಪೊಲೀಸ್ ಇನ್ಸ್‌ಪೆಕ್ಟರ್, ಎಸ್.ಆರ್ ನಗರ |
| ವಾಸ | : | ಬೆಂಗಳೂರು |

ಸಾಕ್ಷಿಗೆ ದಿನಾಂಕಃ 24.02.2026ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ನಾನು ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಸೆಪ್ಟೆಂಬರ್ 2018 ರಿಂದ ಆಗಸ್ಟ್2019ರವರೆಗೆ PSI ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನು.

ದಿನಾಂಕಃ 22.03.2019ರಂದು ಬೆಃ 11ಗಂಟೆ ಸವಯದಲ್ಲಿ ನಾನು ಠಾಣೆಯಲ್ಲಿದ್ದಾಗ ಚಾಮರಾಜನಗರ ಟೌನಿನ ಪಾಲಿಟೆಕ್ನಿಕ್ ಕಾಲೇಜ್ ಕಡೆಗೆ ಒಬ್ಬ ವ್ಯಕ್ತಿಯು ಬಟ್ಟೆ ಬ್ಯಾಗಿನಲ್ಲಿ ಮದ್ಯದ ಪೌಚ್‌ಗಳನ್ನು ಸಾಗಿಸುತ್ತಿರುವ ಬಾತ್ಮೀ ಬಂದಿರುತ್ತದೆ. ಆಗ ನಮ್ಮ ಠಾಣಾ ಸಿಬ್ಬಂದಿಗಳಾದ ಚಾಸಾ-4 ಮತ್ತು 5ರವರ ಜೊತೆ ಇಲಾಖಾ ವಾಹನ ಸಃ KA-10-G-487ರಲ್ಲಿ ಸಿಬ್ಬಂದಿಗಳ ಜೊತೆ ಠಾಣೆಯಿಂದ ಹೊರಟು ಮಾರ್ಗ ಮದ್ಯೆ ಪಂಚರಾದ ಚಾಸಾ-2 ಮತ್ತು 3ರವರಿಗೆ ಬಾತ್ಮೀಯ ವಿಚಾರವನ್ನು ತಿಳಿಸಿ, ಅವರನ್ನು ಜೊತೆಯಲ್ಲಿ ಕರೆದುಕೊಂಡು ಚಾಮರಾಜನಗರ ಟೌನಿನ ಪಾಲಿಟೆಕ್ನಿಕ್ ಕಾಲೇಜಿನ ರಸ್ತೆಯ ದಾಸ್ ಪೆಟ್ರೋಲ್ ಬಂಕ್ ಹತ್ತಿರ ಹೊಸದಾಗಿ ನಿರ್ಮಾಣವಾಗುತ್ತಿದ್ದ ಮೇಲು ಸೇತುವೆ ಹತ್ತಿರ ಚಾಮರಾಜನಗರ- ನಂಜನಗೂಡು ಮುಖ್ಯರಸ್ತೆಯಲ್ಲಿ ಹೋಗಿ ನಮ್ಮ ಜೀಪನ್ನು ಮರೆಯಾಗಿ ನಿಲ್ಲಿಸಿ ನಾವುಗಳು ಕಾಯುತ್ತಿದ್ದಾಗ ಆಗ ಸಮಯ ಬೆಃ 11.15ರಲ್ಲಿ

ಒಬ್ಬ ಆಸಾಮಿಯು ಒಂದು ಕೈಯಲ್ಲಿ ಬಟ್ಟೆಯ ಬ್ಯಾಗನ್ನು ಹಿಡಿದುಕೊಂಡು, ನಡೆದುಕೊಂಡು ಬರುತ್ತಿದ್ದನು. ಆಗ ನಾವುಗಳು ಆತನನ್ನು ಹಿಡಿದು, ಆತನ ಹೆಸರು,ವಿಳಾಸ ಕೇಳಿ ತಿಳಿದುಕೊಂಡೇವು.

ಆತನ ಕೈಯಲ್ಲಿದ್ದ ಬಟ್ಟೆಯ ಬ್ಯಾಗನ್ನು ಪರಿಶೀಲಿಸಿದಾಗ ಅದರಲ್ಲಿ 90 ಎಂ.ಎಲ್.ನ ಒರಿಜಿನಲ್ ಚಾಯ್ಸ್ ವಿಸ್ಕೀಯ ಮದ್ಯದ ಪೌಚಗಳು ಇದ್ದವು, ನಂತರ ಈ ಬಗ್ಗೆ ಆಸಾಮಿಯ ಬಳಿ ಯಾವುದೇ ಪರವಾನಿಗೆ ಇಲ್ಲದ ಕಾರಣ ಬಟ್ಟೆಯ ಬ್ಯಾಗನ್ನು ಪರಿಶೀಲಿಸಿದೇವು, ಅದರಲ್ಲಿ ಒರಿಜಿನಲ್ ಚಾಯ್ಸ್ ವಿಸ್ಕೀಯ 90 ಎಂ.ಎಲ್.ನ 23 ಮದ್ಯ ತುಂಬಿದ ಪೌಚ್ ಗಳು ಮತ್ತು ವಿನ್ಸರ್ ಡಿಲಕ್ಸ ವಿಸ್ಕೀಯ 90 ಎಂ.ಎಲ್.ನ 10 ಮದ್ಯ ತುಂಬಿದ ಟೆಟ್ರಾಪ್ಯಾಕ್‌ಗಳು ಇದ್ದವು, ಅವುಗಳ ಮೇಲೆ ಇದ್ದ ವಿವರವನ್ನು ಪರಿಶೀಲಿಸಿ, ಬೆಃ 11.20 ರಿಂದ ಮಃ 12.20ರವರೆಗೆ ಮಹಜರ್ ಕ್ರಮ ಜರುಗಿಸಿ ಎಲ್ಲಾ ಮದ್ಯದ ಪೌಚ್ ಗಳನ್ನು ಪ್ರತ್ಯೇಕವಾಗಿ ಒಂದು ಬಿಳಿಯ ಬಟ್ಟೆಯ ಚೀಲದಲ್ಲಿ ಹಾಕಿ ಬಾಯಿಯನ್ನು ಕಟ್ಟಿ ಆರ್ ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲು ಮಾಡಿ, ಆರೋಪಿಯನ್ನು ಮತ್ತು ಬಟ್ಟೆಯ ಬ್ಯಾಗಿನ ಜೊತೆ ಎಲ್ಲಾ ಮದ್ಯವನ್ನು ಅಮಾನತ್ತುಪಡಿಸಿಕೊಂಡೆವು.

ಆರೋಪಿಯನ್ನು ಮತ್ತು ಅಮಾನತ್ತುಪಡಿಸಿಕೊಂಡ ಮದ್ಯವನ್ನು ಹಾಗೂ ಬಟ್ಟೆಯ ಬ್ಯಾಗನ್ನು ಪೊಲೀಸ್ ಠಾಣೆಗೆ ತಂದು ಒಂದು ಸ್ವ-ವರದಿಯನ್ನು ತಯಾರಿಸಿ, ಅಮಾನತ್ತುಪಡಿಸಿಕೊಂಡ ಮದ್ಯ ಮತ್ತು ಬಟ್ಟೆಯ ಬ್ಯಾಗ್‌ನ್ನು ಮತ್ತು ಸ್ಥಳದಲ್ಲಿ ಮಾಡಿದ್ದ ಮಹಜರ್ ಮತ್ತು ಆರೋಪಿಯನ್ನು ಠಾಣಾಧಿಕಾರಿಗಳ ವಶಕ್ಕೆ ನೀಡಿರುತ್ತೇನೆ. ಸಾಕ್ಷಿಯು ಸ್ವ-ವರದಿಯನ್ನು ನೋಡಿ ಗುರ್ತಿಸಿದ್ದು, ಅದನ್ನು ಈಗಾಗಲೇ ನಿಪಿ.4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.4(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ಥಳ ಮಹಜರ್ ನ್ನು ನೋಡಿ ಗುರ್ತಿಸಿದ್ದು ಅದನ್ನು ಈಗಾಗಲೇ ನಿಪಿ.1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.1(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು.ಮಾ-1 ರಿಂದ 34 ನ್ನು ನೋಡಿ ಗುರ್ತಿಸಿರುತ್ತಾರೆ. ಸಾಕ್ಷಿಯು ಆರೋಪಿಯನ್ನು ನೋಡಿ ಗುರ್ತಿಸಿರುತ್ತಾರೆ.

ಆ ನಂತರ ಈ ಪ್ರಕರಣದ ತನಿಖೆಯನ್ನು ಚಾಸಾ-8ರವರು ಪೂರೈಸಿ ಈ ಪ್ರಕರಣದ ಕಡತವನ್ನು ನನಗೆ ನೀಡಿದ್ದು, ಕಡತವನ್ನು ಪರಿಶೀಲಿಸಿ ಲಭ್ಯವಾದ ಎಲ್ಲಾ ಸಾಕ್ಷ್ಯಧಾರಗಳಿಂದ ಆರೋಪಿತನ ವಿರುದ್ಧ ಆಪಾದನೆ ದೃಢಪಟ್ಟಿದ್ದರಿಂದ ಘನ ನ್ಯಾಯಾಲಯದ ಮುಂದೆ ಅಂತಿಮ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿಕೊಂಡಿರುತ್ತೇನೆ.

**ಪಾಟೀಸವಾಲುಃ ಶ್ರೀಮತಿ. ಬಿ.ವಿ ವಕೀಲರಿಂದಃ**

ದಿನಾಂಕಃ 22.03.2019ರಂದು ಬೆಃ 11ಗಂಟೆ ಸವಯದಲ್ಲಿ ನಾನು ಠಾಣೆಯಲ್ಲಿದ್ದಾಗ ಚಾಮರಾಜನಗರ ಟೌನಿನ ಪಾಲಿಟೆಕ್ನಿಕ್ ಕಾಲೇಜ್ ಕಡೆಗೆ ಒಬ್ಬ ವ್ಯಕ್ತಿಯು ಬಟ್ಟೆ ಬ್ಯಾಗಿನಲ್ಲಿ ಮದ್ಯದ ಪೌಚ್‌ಗಳನ್ನು ಸಾಗಿಸುತ್ತಿರುವ ಬಾತ್ಮೀ ಬಂದಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ನಮ್ಮ ಠಾಣಾ ಸಿಬ್ಬಂದಿಗಳಾದ ಚಾಸಾ-4 ಮತ್ತು 5ರವರ ಜೊತೆ ಇಲಾಖಾ ವಾಹನ ಸಃ KA-10-G-487ರಲ್ಲಿ ಸಿಬ್ಬಂದಿಗಳ ಜೊತೆ ಠಾಣೆಯಿಂದ ಹೊರಟು ಮಾರ್ಗ ಮಧ್ಯೆ ಪಂಚರಾದ ಚಾಸಾ-2 ಮತ್ತು 3ರವರಿಗೆ ಬಾತ್ಮೀಯ ವಿಚಾರವನ್ನು ತಿಳಿಸಿಲ್ಲ ಎಂದರೆ ಸರಿಯಲ್ಲ. ನಂತರ ಅವರನ್ನು ಜೊತೆಯಲ್ಲಿ ಕರೆದುಕೊಂಡು ಚಾಮರಾಜನಗರ ಟೌನಿನ ಪಾಲಿಟೆಕ್ನಿಕ್ ಕಾಲೇಜಿನ ರಸ್ತೆಯ ದಾಸ್ ಪೆಟ್ರೋಲ್ ಬಂಕ್ ಹತ್ತಿರ ಹೊಸದಾಗಿ ನಿರ್ಮಾಣವಾಗುತ್ತಿದ್ದ ಮೇಲು ಸೇತುವೆ ಹತ್ತಿರ ಚಾಮರಾಜನಗರ-ನಂಜನಗೂಡು ಮುಖ್ಯರಸ್ತೆಯಲ್ಲಿ ಹೋಗಿ ನಮ್ಮ ಜೀಪನ್ನು ಮರೆಯಾಗಿ ನಿಲ್ಲಿಸಿ ನಾವುಗಳು ಕಾಯುತ್ತಿದ್ದಾಗ ಆಗ ಸಮಯ ಬೆಃ 11.15ರಲ್ಲಿ ಒಬ್ಬ ಆಸಾಮಿಯು ಒಂದು ಕೈಯಲ್ಲಿ ಬಟ್ಟೆಯ ಬ್ಯಾಗನ್ನು ಹಿಡಿದುಕೊಂಡು, ನಡೆದುಕೊಂಡು ಬರುತ್ತಿದ್ದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ನಾವುಗಳು ಆತನನ್ನು ಹಿಡಿದು, ಆತನ ಹೆಸರು,ವಿಳಾಸ ಕೇಳಿ ತಿಳಿದುಕೊಂಡೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆತನ ಕೈಯಲ್ಲಿದ್ದ ಬಟ್ಟೆಯ ಬ್ಯಾಗನ್ನು ಪರಿಶೀಲಿಸಿದಾಗ ಅದರಲ್ಲಿ 90 ಎಂ.ಎಲ್.ನ ಒರಿಜಿನಲ್ ಚಾಯ್ಸ್ ವಿಸ್ಕೀಯ ಮದ್ಯದ ಪೌಚಗಳು ಇದ್ದವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಈ ಬಗ್ಗೆ ಆಸಾಮಿಯ ಬಳಿ ಯಾವುದೇ ಪರವಾನಿಗೆ ಇಲ್ಲದ

ಕಾರಣ ಬಟ್ಟೆಯ ಬ್ಯಾಗನ್ನು ಪರಿಶೀಲಿಸಿದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದರಲ್ಲಿ ಒರಿಜಿನಲ್ ಚಾಯ್ಸ್ ವಿಸ್ಕೀಯ 90 ಎಂ.ಎಲ್.ನ 23 ಮದ್ಯ ತುಂಬಿದ ಪೌಚ್ ಗಳು ಮತ್ತು ವಿನ್ಸರ್ ಡಿಲಕ್ಸ ವಿಸ್ಕೀಯ 90 ಎಂ.ಎಲ್.ನ 10 ಮದ್ಯ ತುಂಬಿದ ಟೆಟ್ರಾಪ್ಯಾಕ್‌ಗಳು ಇರಲಿಲ್ಲ ಎಂದರೆ ಸರಿಯಲ್ಲ. ಅವುಗಳ ಮೇಲೆ ಇದ್ದ ವಿವರವನ್ನು ಪರಿಶೀಲಿಸಿ, ಬೆಃ 11.20 ರಿಂದ ಮಃ 12.20ರವರೆಗೆ ಮಹಜರ್ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ಎಲ್ಲಾ ಮದ್ಯದ ಪೌಚ್ ಗಳನ್ನು ಪ್ರತ್ಯೇಕವಾಗಿ ಒಂದು ಬಿಳಿಯ ಬಟ್ಟೆಯ ಚೀಲದಲ್ಲಿ ಹಾಕಿ ಬಾಯಿಯನ್ನು ಕಟ್ಟಿ ಆರ್ ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲು ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ಮತ್ತು ಬಟ್ಟೆಯ ಬ್ಯಾಗಿನ ಜೊತೆ ಎಲ್ಲಾ ಮದ್ಯವನ್ನು ಅಮಾನತ್ತುಪಡಿಸಿಕೊಂಡೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿಯನ್ನು ಮತ್ತು ಅಮಾನತ್ತುಪಡಿಸಿಕೊಂಡ ಮದ್ಯವನ್ನು ಹಾಗೂ ಬಟ್ಟೆಯ ಬ್ಯಾಗನ್ನು ಪೊಲೀಸ್ ಠಾಣೆಗೆ ತಂದು ಒಂದು ಸ್ವ-ವರದಿಯನ್ನು ತಯಾರಿಸಿ, ಅಮಾನತ್ತುಪಡಿಸಿಕೊಂಡ ಮದ್ಯ ಮತ್ತು ಬಟ್ಟೆಯ ಬ್ಯಾಗ್‌ನ್ನು ಮತ್ತು ಸ್ಥಳದಲ್ಲಿ ಮಾಡಿದ್ದ ಮಹಜರ್ ಮತ್ತು ಆರೋಪಿಯನ್ನು ಠಾಣಾಧಿಕಾರಿಗಳ ವಶಕ್ಕೆ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿತನ ವಿರುದ್ಧ ಆಪಾದನೆ ದೃಢಪಟ್ಟಿದ್ದರಿಂದ ಘನ ನ್ಯಾಯಾಲಯದ ಮುಂದೆ ಸುಳ್ಳು ಅಂತಿಮ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** ಇಲ್ಲ.
(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ., ಚಾಮರಾಜನಗರ.

# ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಸಿ.ಜೆ.ಎಂ. ನ್ಯಾಯಾಲಯ,
# ಚಾಮರಾಜನಗರ

## ಸಿ.ಸಿಃ 899/2025

ಫ್ರಾಸಾ-5, ಚಾಸಾ-5

| | | |
|---|---|---|
| ಸಾಕ್ಷಿದಾರರ ಹೆಸರು | : | ಪ್ರದೀಪ್ ಕೆ |
| ತಂದೆಯ ಹೆಸರು | : | ಲೇಟ್ ಸಿದ್ದಗಂಗಪ್ಪ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಮುಖ್ಯಪೇದೆ |
| ವಾಸ | : | ಚಾಮರಾಜನಗರ ಟೌನ್ |

ಸಾಕ್ಷಿಗೆ ದಿನಾಂಕಃ 24.02.2026ರಂದು ವಿ.ಸಿ. ಮುಖಾಂತರ ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ನಾನು ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ 2016 ರಿಂದ 2020ರವರೆಗೆ ಪೊಲೀಸ್ ಪೇದೆಯಾಗಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನು.

ದಿನಾಂಕಃ 22.03.2019ರಂದು ಬೆಃ 11ಗಂಟೆ ಸಮಯದಲ್ಲಿ ನಾನು ಠಾಣೆಯಲ್ಲಿದ್ದಾಗ ಚಾಸಾ-1ರವರಿಗೆ ಚಾಮರಾಜನಗರ ಟೌನಿನ ಪಾಲಿಟೆಕ್ನಿಕ್ ಕಾಲೇಜ್ ಕಡೆಗೆ ಒಬ್ಬ ವ್ಯಕ್ತಿಯು ಬಟ್ಟೆ ಬ್ಯಾಗಿನಲ್ಲಿ ಮದ್ಯದ ಪೌಚ್‌ಗಳನ್ನು ಸಾಗಿಸುತ್ತಿರುವ ಬಾತ್ಮೀ ಬಂದಿರುತ್ತದೆ. ಸದರಿ ವಿಚಾರವನ್ನು ಚಾಸಾ-1ರವರು ನನಗೂ ಮತ್ತು ಚಾಸಾ-4ರವರಿಗೆ ತಿಳಿಸಿ, ಆಗ ನಾವೆಲ್ಲರೂ ಇಲಾಖಾ ವಾಹನ ಸಃ KA-10-G-487ರಲ್ಲಿ ಹೊರಟು ಮಾರ್ಗ ಮಧ್ಯೆ ಪಂಚರಾದ ಚಾಸಾ-2 ಮತ್ತು 3ರವರಿಗೆ ಬಾತ್ಮೀಯ ವಿಚಾರವನ್ನು ತಿಳಿಸಿ, ಅವರನ್ನು ಜೊತೆಯಲ್ಲಿ ಕರೆದುಕೊಂಡು ಚಾಮರಾಜನಗರ ಟೌನಿನ ಪಾಲಿಟೆಕ್ನಿಕ್ ಕಾಲೇಜಿನ ರಸ್ತೆಯ ದಾಸ್ ಪೆಟ್ರೋಲ್ ಬಂಕ್ ಹತ್ತಿರ ಹೊಸದಾಗಿ ನಿರ್ಮಾಣವಾಗುತ್ತಿದ್ದ

ಮೇಲು ಸೇತುವೆ ಹತ್ತಿರ ಚಾಮರಾಜನಗರ- ನಂಜನಗೂಡು ಮುಖ್ಯರಸ್ತೆಯಲ್ಲಿ ಹೋಗಿ ನಮ್ಮ ಜೀಪನ್ನು ಮರೆಯಾಗಿ ನಿಲ್ಲಿಸಿ ನಾವುಗಳು ಕಾಯುತ್ತಿದ್ದಾಗ ಆಗ ಸಮಯ ಬೆಃ 11.15ರಲ್ಲಿ ಒಬ್ಬ ಆಸಾಮಿಯು ಒಂದು ಕೈಯಲ್ಲಿ ಬಟ್ಟೆಯ ಬ್ಯಾಗನ್ನು ಹಿಡಿದುಕೊಂಡು, ನಡೆದುಕೊಂಡು ಬರುತ್ತಿದ್ದನು. ಆಗ ನಾವುಗಳು ಆತನನ್ನು ಹಿಡಿದು, ಆತನ ಹೆಸರು,ವಿಳಾಸ ಕೇಳಿ ತಿಳಿದುಕೊಂಡೇವು.

ಆತನ ಕೈಯಲ್ಲಿದ್ದ ಬಟ್ಟೆಯ ಬ್ಯಾಗನ್ನು ಪರಿಶೀಲಿಸಿದಾಗ ಅದರಲ್ಲಿ 90 ಎಂ.ಎಲ್.ನ ಒರಿಜಿನಲ್ ಚಾಯ್ಸ್ ವಿಸ್ಕೀಯ ಮದ್ಯದ ಪೌಚಗಳು ಇದ್ದವು, ನಂತರ ಈ ಬಗ್ಗೆ ಆಸಾಮಿಯ ಬಳಿ ಯಾವುದೇ ಪರವಾನಿಗೆ ಇಲ್ಲದ ಕಾರಣ ಬಟ್ಟೆಯ ಬ್ಯಾಗನ್ನು ಪರಿಶೀಲಿಸಿದೇವು, ಅದರಲ್ಲಿ ಒರಿಜಿನಲ್ ಚಾಯ್ಸ್ ವಿಸ್ಕೀಯ 90 ಎಂ.ಎಲ್.ನ 23 ಮದ್ಯ ತುಂಬಿದ ಪೌಚ್ ಗಳು ಮತ್ತು ವಿನ್ಸರ್ ಡಿಲಕ್ಸ ವಿಸ್ಕೀಯ 90 ಎಂ.ಎಲ್.ನ 10 ಮದ್ಯ ತುಂಬಿದ ಟೆಟ್ರಾಪ್ಯಾಕ್‌ಗಳು ಇದ್ದವು, ಅವುಗಳ ಮೇಲೆ ಇದ್ದ ವಿವರವನ್ನು ಪರಿಶೀಲಿಸಿ, ಬೆಃ 11.20 ರಿಂದ ಮಃ 12.20ರವರೆಗೆ ಮಹಜರ್ ಕ್ರಮ ಜರುಗಿಸಿ ಎಲ್ಲಾ ಮದ್ಯದ ಪೌಚ್ ಗಳನ್ನು ಪ್ರತ್ಯೇಕವಾಗಿ ಒಂದು ಬಿಳಿಯ ಬಟ್ಟೆಯ ಚೀಲದಲ್ಲಿ ಹಾಕಿ ಬಾಯಿಯನ್ನು ಕಟ್ಟಿ ಆರ್ ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲು ಮಾಡಿ, ಆರೋಪಿಯನ್ನು ಮತ್ತು ಬಟ್ಟೆಯ ಬ್ಯಾಗಿನ ಜೊತೆ ಎಲ್ಲಾ ಮದ್ಯವನ್ನು ಅಮಾನತ್ತುಪಡಿಸಿಕೊಂಡೆವು.

ಆನಂತರ ಆರೋಪಿಯನ್ನು ಮಾಲುಗಳೊಂದಿಗೆ ಪೊಲೀಸ್ ಠಾಣೆಗೆ ಕರೆತರಲಾಯಿತು.

ಸಾಕ್ಷಿಯು ಸ್ಥಳ ಮಹಜರ್ ನ್ನು ನೋಡಿ ಗುರ್ತಿಸಿದ್ದು ಅದನ್ನು ಈಗಾಗಲೇ ನಿಪಿ.1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.1(ಇ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು.ಮಾ-1 ರಿಂದ 34 ನ್ನು ನೋಡಿ ಗುರ್ತಿಸಿರುತ್ತಾರೆ. ಸಾಕ್ಷಿಯು ಆರೋಪಿಯನ್ನು ನೋಡಿ ಗುರ್ತಿಸಿರುತ್ತಾರೆ. ಈ ಬಗ್ಗೆ ತನಿಖಾಧಿಕಾರಿಗಳಿಗೆ ಹೇಳಿಕೆ ನೀಡಿರುತ್ತೇನೆ.

**<u>ಪಾಟೀಸವಾಲುಃ ಶ್ರೀಮತಿ. ಬಿ.ವಿ ವಕೀಲರಿಂದಃ</u>**

ದಿನಾಂಕಃ 22.03.2019ರಂದು ಬೆಃ 11ಗಂಟೆ ಸಮಯದಲ್ಲಿ ನಾನು ಠಾಣೆಯಲ್ಲಿದ್ದಾಗ ಚಾಸಾ-1ರವರಿಗೆ ಚಾಮರಾಜನಗರ ಟೌನಿನ ಪಾಲಿಟೆಕ್ನಿಕ್ ಕಾಲೇಜ್

-3-

ಕಡೆಗೆ ಒಬ್ಬ ವ್ಯಕ್ತಿಯು ಬಟ್ಟೆ ಬ್ಯಾಗಿನಲ್ಲಿ ಮದ್ಯದ ಪೌಚ್‌ಗಳನ್ನು ಸಾಗಿಸುತ್ತಿರುವ ಬಾತ್ಮೀ ಬಂದಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ಚಾಸಾ-1ರವರು ನನಗೂ ಮತ್ತು ಚಾಸಾ-4ರವರಿಗೆ ತಿಳಿಸಿಲ್ಲ ಎಂದರೆ ಸರಿಯಲ್ಲ. ಆಗ ನಾವೆಲ್ಲರೂ ಇಲಾಖಾ ವಾಹನ ಸಃ KA-10-G-487ರಲ್ಲಿ ಹೊರಟು ಮಾರ್ಗ ಮಧ್ಯೆ ಪಂಚರಾದ ಚಾಸಾ-2 ಮತ್ತು 3ರವರಿಗೆ ಬಾತ್ಮೀಯ ವಿಚಾರವನ್ನು ತಿಳಿಸಿಲ್ಲ ಎಂದರೆ ಸರಿಯಲ್ಲ. ನಂತ ಅವರನ್ನು ಜೊತೆಯಲ್ಲಿ ಕರೆದುಕೊಂಡು ಚಾಮರಾಜನಗರ ಟೌನಿನ ಪಾಲಿಟೆಕ್ನಿಕ್ ಕಾಲೇಜಿನ ರಸ್ತೆಯ ದಾಸ್ ಪೆಟ್ರೋಲ್ ಬಂಕ್ ಹತ್ತಿರ ಹೊಸದಾಗಿ ನಿರ್ಮಾಣವಾಗುತ್ತಿದ್ದ ಮೇಲು ಸೇತುವೆ ಹತ್ತಿರ ಚಾಮರಾಜನಗರ- ನಂಜನಗೂಡು ಮುಖ್ಯರಸ್ತೆಯಲ್ಲಿ ಹೋಗಿ ನಮ್ಮ ಜೀಪನ್ನು ಮರೆಯಾಗಿ ನಿಲ್ಲಿಸಿ ನಾವುಗಳು ಕಾಯುತ್ತಿದ್ದಾಗ ಆಗ ಸಮಯ ಬೆಃ 11.15ರಲ್ಲಿ ಒಬ್ಬ ಆಸಾಮಿಯು ಒಂದು ಕೈಯಲ್ಲಿ ಬಟ್ಟೆಯ ಬ್ಯಾಗನ್ನು ಹಿಡಿದುಕೊಂಡು, ನಡೆದುಕೊಂಡು ಬರುತ್ತಿದ್ದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ನಾವುಗಳು ಆತನನ್ನು ಹಿಡಿದು, ಆತನ ಹೆಸರು,ವಿಳಾಸ ಕೇಳಿ ತಿಳಿದುಕೊಂಡೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆತನ ಕೈಯಲ್ಲಿದ್ದ ಬಟ್ಟೆಯ ಬ್ಯಾಗನ್ನು ಪರಿಶೀಲಿಸಿದಾಗ ಅದರಲ್ಲಿ 90 ಎಂ.ಎಲ್.ನ ಒರಿಜಿನಲ್ ಚಾಯ್ಸ್ ವಿಸ್ಕೀಯ ಮಧ್ಯದ ಪೌಚಗಳು ಇದ್ದವು, ನಂತರ ಈ ಬಗ್ಗೆ ಆಸಾಮಿಯ ಬಳಿ ಯಾವುದೇ ಪರವಾನಿಗೆ ಇಲ್ಲದ ಕಾರಣ ಬಟ್ಟೆಯ ಬ್ಯಾಗನ್ನು ಪರಿಶೀಲಿಸಿದೇವು, ಅದರಲ್ಲಿ ಒರಿಜಿನಲ್ ಚಾಯ್ಸ್ ವಿಸ್ಕೀಯ 90 ಎಂ.ಎಲ್.ನ 23 ಮಧ್ಯ ತುಂಬಿದ ಪೌಚ್ ಗಳು ಮತ್ತು ವಿನ್ಸರ್ ಡಿಲಕ್ಸ ವಿಸ್ಕೀಯ 90 ಎಂ.ಎಲ್.ನ 10 ಮಧ್ಯ ತುಂಬಿದ ಟೆಟ್ರಾಪ್ಯಾಕ್‌ಗಳು ಇದ್ದವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವುಗಳ ಮೇಲೆ ಇದ್ದ ವಿವರವನ್ನು ಪರಿಶೀಲಿಸಿ, ಬೆಃ 11.20 ರಿಂದ ಮಃ 12.20ರವರೆಗೆ

ಮಹಜರ್ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ಎಲ್ಲಾ ಮದ್ಯದ ಪೌಚ್ ಗಳನ್ನು ಪ್ರತ್ಯೇಕವಾಗಿ ಒಂದು ಬಿಳಿಯ ಬಟ್ಟೆಯ ಚೀಲದಲ್ಲಿ ಹಾಕಿ ಬಾಯಿಯನ್ನು ಕಟ್ಟಿ ಆರ್ ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲು ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ಮತ್ತು ಬಟ್ಟೆಯ ಬ್ಯಾಗಿನ ಜೊತೆ ಎಲ್ಲಾ ಮದ್ಯವನ್ನು ಅಮಾನತ್ತುಪಡಿಸಿಕೊಂಡೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆನಂತರ ಆರೋಪಿಯನ್ನು ಮಾಲುಗಳೊಂದಿಗೆ ಪೊಲೀಸ್ ಠಾಣೆಗೆ ಕರೆತರಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ತನಿಖಾಧಿಕಾರಿಗಳಿಗೆ ಹೇಳಿಕೆ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
**ಸಿ.ಜೆ.ಎಂ., ಚಾಮರಾಜನಗರ.**